# ಡ್ರುಪಲ್ ಗಾಗಿ (Drupal) ಸೂಚನಾಪತ್ರ

ಸ್ಪೋಕನ್ ಟ್ಯುಟೋರಿಯಲ್ ತಂಡ

ಐ ಐ ಟಿ ಬಾಂಬೆ

## ೧. ಅಭ್ಯಾಸ ಮಾಡುವ ವಿಧಾನ:

೧. ನಿಮಗೆ ಕೆಲವು ಸ್ಪೋಕನ್ ಟ್ಯುಟೋರಿಯಲ್ ಗಳನ್ನು ಮತ್ತು ಫೈಲ್ ಗಳನ್ನು ಕೊಡಲಾಗಿದೆ.
೨. ನೀವು ಸಾಮಾನ್ಯವಾಗಿ ಒಂದು ಸಮಯದಲ್ಲಿ ಒಂದು ಟ್ಯುಟೋರಿಯಲ್ ಅನ್ನು ಮಾಡುವಿರಿ.
೩. ನೀವು ಯಾವುದೇ ಒಂದು ಸ್ಪೋಕನ್ ಟ್ಯುಟೋರಿಯಲ್ ಅನ್ನು ಕೇಳಬಹುದು ಮತ್ತು side-by-side ಎಂಬ ವೀಡಿಯೋದಲ್ಲಿ ತೋರಿಸಲಾದ ಎಲ್ಲಾ ಹಂತಗಳನ್ನು ಪುನರಾವರ್ತಿಸುವ ಮೂಲಕ ಅಭ್ಯಾಸ ಮಾಡಬಹುದು.
೪. ಒಂದುವೇಳೆ, ನಿಮಗೆ ಮೇಲೆ ಹೇಳಿದಂತೆ ಮಾಡಲು ಕಷ್ಟವಾದರೆ, ನೀವು ಇಡೀ ಟ್ಯುಟೋರಿಯಲ್ ಅನ್ನು ಒಮ್ಮೆ ಕೇಳಿ. ಆನಂತರ, ಎರಡನೆಯ ಸಲ ಕೇಳುವ ಸಮಯದಲ್ಲಿ ಅಭ್ಯಾಸ ಮಾಡಬಹುದು.

## ೨ ದ್ರುಪಲ್ (Drupal):

೧. ನಿಮ್ಮ ಕಂಪ್ಯೂಟರ್ ನಲ್ಲಿ spoken ಎಂಬ ಫೋಲ್ಡರ್ ಅನ್ನು ಹುಡುಕಿ ಮತ್ತು ಅದನ್ನು ತೆರೆಯಿರಿ (ಅಥವಾ ನಿಮ್ಮ ಸಂಯೋಜಕ / ಬೋಧಕರನ್ನು ಕೇಳಿ).
೨. ರೈಟ್- ಕ್ಲಿಕ್ ಮಾಡಿ ಮತ್ತು Firefox/Chrome (ಫೈರ್ಫಾಕ್ಸ್ / ಕ್ರೋಮ್) ಬ್ರೌಸರ್ ಅನ್ನು ಬಳಸಿ index.html ಎಂಬ ಫೈಲ್ ಅನ್ನು ತೆರೆಯಿರಿ. ಫೈಲ್ ಅನ್ನು ತೆರೆಯಲು ಇಂಟರ್ನೆಟ್ ಎಕ್ಸ್ಪ್ಲೋರರ್ ಅನ್ನು ಬಳಸಬೇಡಿ. IE, ಸ್ಪೋಕನ್ ಟ್ಯುಟೋರಿಯಲ್ ಅನ್ನು ಸರಿಯಾಗಿ ತೋರಿಸದಿರಬಹುದು.
೩. ಈ ಕೆಳಗೆ ಹೇಳಿದ ಯಾವುದೇ ಹಂತವು ಕೆಲಸ ಮಾಡದಿದ್ದರೆ, ದಯವಿಟ್ಟು ನೀವು ಬಳಸುವ ಬ್ರೌಸರ್ ಅನ್ನು ಪರಿಶೀಲಿಸಿ. ಒಂದುವೇಳೆ ನೀವು IE ಯನ್ನು ಬಳಸುತ್ತಿದ್ದರೆ, ದಯವಿಟ್ಟು ಅದನ್ನು ಮುಚ್ಚಿ ಮತ್ತು ಪುನಃ Firefox/Chrome ನೊಂದಿಗೆ ತೆರೆಯಿರಿ.
೪. ಡೀಫಾಲ್ಟ್ ಆಗಿ, Side-by-Side Method ವೀಡಿಯೊ ಕಾಣಿಸಿಕೊಳ್ಳುತ್ತದೆ. ಇದು ಸುಲಭವಾದ ಒಂದು ಸ್ವಯಂ ಕಲಿಕೆಯ ವಿಧಾನವನ್ನು ವಿವರಿಸುತ್ತದೆ. ಮೊದಲು ಈ ಟ್ಯುಟೋರಿಯಲ್ ಅನ್ನು ಕೇಳಿ. ಸ್ಪೋಕನ್ ಟ್ಯುಟೋರಿಯಲ್ ಗಳನ್ನು ಬಳಸಿಕೊಂಡು Drupal ಅನ್ನು ಕಲಿಯಲು ನೀವು ಈ ವಿಧಾನವನ್ನು ಅನುಸರಿಸಿ.
೫. ಸ್ಕ್ರೀನ್ ನ ಮೇಲ್ಭಾಗದಲ್ಲಿ Select Foss Category ಎಂಬ ಡ್ರಾಪ್-ಡೌನ್ ಮೇಲೆ ಕ್ಲಿಕ್ ಮಾಡಿ ಮತ್ತು Drupal ಅನ್ನು ಆಯ್ಕೆಮಾಡಿ.
೬. Select Language ಎಂಬ ಡ್ರಾಪ್-ಡೌನ್ ಮೇಲೆ ಕ್ಲಿಕ್ ಮಾಡಿ ಮತ್ತು ಇದರಲ್ಲಿ ಲಭ್ಯವಿರುವ ಭಾಷೆಗಳಲ್ಲಿ, ನೀವು ಈ ಟ್ಯುಟೋರಿಯಲ್ ಅನ್ನು ಕಲಿಯಲು ಬಯಸುವ ಭಾಷೆಯನ್ನು ಆಯ್ಕೆಮಾಡಿ.
೭. Submit ಗುಂಡಿಯನ್ನು ಕ್ಲಿಕ್ ಮಾಡಿ.
೮. ನಿಮ್ಮ ಆಯ್ಕೆಯನ್ನು ಆಧರಿಸಿ ನೀವು ಟ್ಯುಟೋರಿಯಲ್ ಗಳ ಒಂದು ಪಟ್ಟಿಯನ್ನು ನೋಡುವಿರಿ.

೯. ಪ್ರದರ್ಶಿಸಲಾದ ಪಟ್ಟಿಯಲ್ಲಿರುವ ಮೊದಲನೆಯ ಟ್ಯುಟೋರಿಯಲ್ ನೊಂದಿಗೆ ಆರಂಭಿಸಿ.

## ೩ ಮೊದಲನೆಯ ಟ್ಯುಟೋರಿಯಲ್- Overview of Drupal:

೧. Overview of Drupal ಎಂಬ ಟ್ಯುಟೋರಿಯಲ್ ಅನ್ನು ಹುಡುಕಿ.
೨. ಈ ಟ್ಯುಟೋರಿಯಲ್, Drupal ಅನ್ನು ಮತ್ತು ಈ ಟ್ಯುಟೋರಿಯಲ್ ಸರಣಿಯ ಅವಲೋಕನವನ್ನು ವಿವರಿಸುತ್ತದೆ.
೩. ನೀವು ವಿವರಣೆಯ ಸಬ್-ಟೈಟಲ್ ನ ಟೆಕ್ಸ್ಟ್ ಅನ್ನು ವೀಕ್ಷಿಸಲು ಬಯಸಿದಲ್ಲಿ, spoken ಫೋಲ್ಡರ್ ನಲ್ಲಿ README.txt ನಲ್ಲಿ ಕೊಟ್ಟಿರುವ ಸೂಚನೆಗಳನ್ನು ಅನುಸರಿಸಿ.
೪. ಪ್ಲೇಯರ್ ನ ಮೇಲೆ ಕ್ಲಿಕ್ ಮಾಡಿ ಮತ್ತು ಟ್ಯುಟೋರಿಯಲ್ ಅನ್ನು ವೀಕ್ಷಿಸಿ.
೫. ಈ ಟ್ಯುಟೋರಿಯಲ್ ಮುಗಿದ ನಂತರ, ಪ್ಲೇ-ಲಿಸ್ಟ್ ವಿಂಡೋದಲ್ಲಿ, Installation of Drupal ಎಂಬ ಮುಂದಿನ ಟ್ಯುಟೋರಿಯಲ್ ನ ಮೇಲೆ ಕ್ಲಿಕ್ ಮಾಡಿ.

## 4 ಎರಡನೆಯ ಟ್ಯುಟೋರಿಯಲ್- Installation of Drupal:

೧. Installation of Drupal ಎಂಬ ಟ್ಯುಟೋರಿಯಲ್ ಅನ್ನು ಹುಡುಕಿ.
೨. ಈ ಟ್ಯುಟೋರಿಯಲ್, Windows OS ಮತ್ತು Ubuntu Linux OS ಗಳ ಮೇಲೆ Bitnami Drupal Stack ಅನ್ನು ಬಳಸಿಕೊಂಡು Drupal 8 ಅನ್ನು ಹೇಗೆ ಇನ್ಸ್ಟಾಲ್ ಮಾಡುವುದೆಂದು ವಿವರಿಸುತ್ತದೆ.
೩. ನಿಮ್ಮ ಸಿಸ್ಟಂ ಅಡ್ಮಿನಿಸ್ಟ್ರೇಟರ್, ಈಗಾಗಲೇ Bitnami Drupal ಅನ್ನು ನಿಮ್ಮ ಕಂಪ್ಯೂಟರ್ ನಲ್ಲಿ ಇನ್ಸ್ಟಾಲ್ ಮಾಡಿರಬೇಕು.
೪. side-by-side ವಿಧಾನವನ್ನು ಬಳಸಿ ಅಭ್ಯಾಸ ಮಾಡಲು-
ನಿಮ್ಮ ಸ್ಕ್ರೀನ್ ನ ಎಡ ಅರ್ಧದಲ್ಲಿ, ಟ್ಯುಟೋರಿಯಲ್ ಅನ್ನು ಹೊಂದಿರುವ ವೆಬ್-ಬ್ರೌಸರ್ ನ ಗಾತ್ರವನ್ನು ಹೊಂದಿಸಿ. ಬಲ ಅರ್ಧದಲ್ಲಿ, ಫೈಲ್ ಬ್ರೌಸರ್ / ಎಕ್ಸ್ಪ್ಲೋರರ್ ಅನ್ನು ತೆರೆಯಿರಿ ಮತ್ತು ಹೊಂದಿಸಿ.
೫. ನೀವು ಲಿನಕ್ಸ್ ಬಳಕೆದಾರರಾಗಿದ್ದರೆ, ವೀಡಿಯೋ ಸಮಯ 6:51 ಗೆ ತೆರಳಿ ಮತ್ತು ಅಲ್ಲಿಂದ ಸೂಚನೆಗಳನ್ನು ಅನುಸರಿಸಿ. 7:09 ನಲ್ಲಿ ಟ್ಯುಟೋರಿಯಲ್, Drupal-8.1.3-0 ಫೋಲ್ಡರ್ ಅನ್ನು ತೆರೆಯಲು ನಿಮ್ಮನ್ನು ಕೇಳುತ್ತದೆ. ನಿಮ್ಮ ಸಿಸ್ಟಮ್, Drupal ನ ಹೊಸ ಆವೃತ್ತಿಯನ್ನು ಹೊಂದಿದ್ದರೆ, ಫೋಲ್ಡರ್ ನ ಹೆಸರು ಹೆಚ್ಚಿನ ಸಂಖ್ಯೆಯನ್ನು ಹೊಂದಿರುತ್ತದೆ. ಇದರ ಬದಲಿಗೆ ಆ ಫೋಲ್ಡರ್ ಅನ್ನು ತೆರೆಯಿರಿ.
೬. Windows ಬಳಕೆದಾರರು ವೀಡಿಯೋದಲ್ಲಿ ನೇರವಾಗಿ ಸಮಯ 7:27 ಗೆ ಹೋಗಬಹುದು ಮತ್ತು Bitnami Drupal Manager Tool ಅನ್ನು ಹೇಗೆ ತೆರೆಯುವುದೆಂದು ಕಲಿಯಬಹುದು.
೭. ಸರ್ವರ್ ಗಳನ್ನು ಪ್ರಾರಂಭಿಸಲು ಸೂಚನೆಗಳನ್ನು ಅನುಸರಿಸಿ.
೮. 8:33 ರಲ್ಲಿ, Go to Application ಮೇಲೆ ನೀವು ಕ್ಲಿಕ್ ಮಾಡಿದಾಗ,

Bitnami Drupal Stack ಎಂಬ ಶೀರ್ಷಿಕೆಯೊಂದಿಗೆ ಒಂದು ಹೊಸ ವಿಂಡೋ ತೆರೆದುಕೊಳ್ಳುವುದು. ಬದಲಾಗಿ, ಒಂದು ಹೊಸ ಟ್ಯಾಬ್ ನಲ್ಲಿ ಇದು ತೆರೆದುಕೊಂಡರೆ, ಹೊಸ ವಿಂಡೋಅನ್ನು ಕ್ರಿಯೇಟ್ ಮಾಡಲು ಇದನ್ನು ಕ್ಲಿಕ್ ಮಾಡಿ ಮತ್ತು ಹೊರಗೆ

ಎಳೆಯಿರಿ.

೯. ಮೇಲೆ ತಿಳಿಸಿದ Bitnami Drupal Stack ವಿಂಡೋಅನ್ನು ರಿಸೈಜ್ ಮಾಡಿ ಮತ್ತು side-by-side ವಿಧಾನವನ್ನು ಅನುಸರಿಸಲು ಅದನ್ನು ಕಂಪ್ಯೂಟರ್ ಸ್ಕ್ರೀನ್ ನ ಬಲ ಅರ್ಧದಲ್ಲಿ ಹೊಂದಿಸಿ.

೧೦. ನಿಮ್ಮ Drupal ವೆಬ್ಸೈಟ್ ನ ಮುಖ್ಯ ಪೇಜನ್ನು ತೆರೆಯಲು, Access Drupal ಮೇಲೆ ಕ್ಲಿಕ್ ಮಾಡಿ.

೧೧. ಸಮಯ 9:00 ರ ತನಕ ಟ್ಯುಟೋರಿಯಲ್ ನ ಅಭ್ಯಾಸವನ್ನು ಮುಂದುವರಿಸಿ. ಇಲ್ಲಿ, Username ಅನ್ನು admin ಎಂದು ಮತ್ತು ಪಾಸ್ವರ್ಡ್ ಅನ್ನು drupal8gr8 ಎಂದು ಕೊಡಿ (ಒಂದುವೇಳೆ, ಇದು ಬೇರೆ ಆಗಿದ್ದರೆ ನಿಮ್ಮ ಸಂಯೋಜಕ / ಬೋಧಕರನ್ನು ಸಂಪರ್ಕಿಸಿ).

೧೨. ಟ್ಯುಟೋರಿಯಲ್ ಅನ್ನು ಮುಂದುವರಿಸಿ ಮತ್ತು ಪೂರ್ಣಗೊಳಿಸಿ.

## ೫ ಮೂರನೇ ಟ್ಯುಟೋರಿಯಲ್- Content Management in Admin Interface:

೧. ವೆಬ್ ಸರ್ವರ್ ಗಳು ರನ್ ಆಗುತ್ತಿರದಿದ್ದರೆ, ಅಥವಾ ನೀವು ಈಗಾಗಲೇ ಲಾಗ್-ಇನ್ ಮಾಡಿರದಿದ್ದರೆ, ವಿಭಾಗ 4 ರ, 5 ರಿಂದ 11ರ ವರೆಗಿನ ಹಂತಗಳಲ್ಲಿರುವ ಸೂಚನೆಗಳನ್ನು ಬಳಸಿ:

(ಅ) ಸರ್ವರ್ ಗಳನ್ನು ಪ್ರಾರಂಭಿಸಿ ಮತ್ತು Drupal ನ ಮೇನ್ ಪೇಜನ್ನು ಪ್ರವೇಶಿಸಿ ಮತ್ತು

(ಬ) admin ಎಂದು ಲಾಗಿನ್ ಮಾಡಿ.

ನೀವು ನಿಮ್ಮ Drupal ಸೈಟ್ ನಲ್ಲಿ ಕೆಲಸ ಮಾಡಲು ಬಯಸಿದಾಗಲೆಲ್ಲ ಮೇಲಿನವುಗಳನ್ನು ನೀವು ಪರಿಶೀಲಿಸಬೇಕಾಗುವುದು.

ಕಂಪ್ಯೂಟರ್ ಸ್ಥಗಿತ, ಬ್ರೌಸರ್ ಕ್ಲಿಯರ್ ಕೇಚ್ ಇತ್ಯಾದಿಗಳು ಸಹ ಸರ್ವರ್ ಗಳನ್ನು ನಿಲ್ಲಿಸುತ್ತವೆ ಮತ್ತು ನಿಮ್ಮನ್ನು ಲಾಗ್-ಔಟ್ ಮಾಡುತ್ತವೆ. ಇಲ್ಲದಿದ್ದರೆ, ನೀವು ಹಿಂದಿನ ಟ್ಯುಟೋರಿಯಲ್ ನಿಂದ ಹಾಗೆಯೇ ಮುಂದುವರಿಸಬಹುದು.

೨. ಪ್ರಸ್ತುತ ಟ್ಯುಟೋರಿಯಲ್ ನ ಕೆಳಗೆ ಸ್ಕ್ರೋಲ್ ಮಾಡಿ ಮತ್ತು Code files ವಿಭಾಗವನ್ನು ಹುಡುಕಿ. ಫೈಲ್ ಅನ್ನು ಕ್ಲಿಕ್ ಮಾಡಿ ಮತ್ತು ಡೌನ್ಲೋಡ್ ಮಾಡಿ (ZIP ಆರ್ಕೈವ್). ಇದು ಈ ಟ್ಯುಟೋರಿಯಲ್ ಗೆ ಬೇಕಾದ logo.png ಎಂಬ ಫೈಲನ್ನು ಒಳಗೊಂಡಿದೆ. ನೀವು ನಿಮ್ಮ ಫೋಲ್ಡರ್ ನಲ್ಲಿ ಅದನ್ನು ಕಾಪಿ ಮಾಡಬಹುದು ಮತ್ತು ಟ್ಯುಟೋರಿಯಲ್ ನಲ್ಲಿ ಹೇಳಿದಂತೆ ಅದನ್ನು ಬಳಸಬಹುದು.

೩. ಈ ಟ್ಯುಟೋರಿಯಲ್ ಮುಗಿದ ನಂತರ, ನಿಮ್ಮ ಕಲಿಕೆಯನ್ನು ಬಲಪಡಿಸಲು ಅಸೈನ್ಮೆಂಟ್ ವಿಭಾಗದಲ್ಲಿ ಒದಗಿಸಲಾದ ಪ್ರಶ್ನೆಗಳನ್ನು ಪೂರ್ಣಗೊಳಿಸಿ.

## ೬ ಮುಂದಿನ ಟ್ಯುಟೋರಿಯಲ್ ಗಳು:

ವಿಭಾಗ 5 ರಲ್ಲಿ ಹೇಳಲಾದ ವಿಧಾನವನ್ನು ಅನುಸರಿಸಿ, ಎಲ್ಲಾ Drupal ಟ್ಯುಟೋರಿಯಲ್ ಗಳನ್ನು ಪೂರ್ಣಗೊಳಿಸಿ. ಪ್ರತಿ ಟ್ಯುಟೋರಿಯಲ್ ಗಾಗಿ ಕೆಳಗಿನವುಗಳನ್ನು ತಪ್ಪದೇ ಮಾಡಿ:

೧. ಸರ್ವರ್ ರನ್ ಆಗುತ್ತಿರದಿದ್ದರೆ ಅದನ್ನು ಆರಂಭಿಸಿ

೨. ಲಾಗ್-ಇನ್ ಮಾಡಿರದಿದ್ದರೆ admin ಎಂದು ಲಾಗ್-ಇನ್ ಮಾಡಿ

೩. Code files ಅನ್ನು ಡೌನ್ಲೋಡ್ ಮಾಡಿ, ಕಾಪಿ ಮಾಡಿ ಮತ್ತು ಉಪಯೋಗಿಸಿ

೪. ಅಸೈನ್ಮೆಂಟ್ ಗಳನ್ನು ಮಾಡಿ.

## ೭ ನಿಮ್ಮ ಇಂಗ್ಲೀಷ್ ನ ಸುಧಾರಣೆ:

೧. ನೀವು ಇಂಗ್ಲೀಷ್ ಭಾಷೆಯನ್ನು ಚೆನ್ನಾಗಿ ತಿಳಿಯದೇ ಇರಲು ಸಾಧ್ಯವಿದೆ. ಹಾಗಿದ್ದಲ್ಲಿ, ನಾವು ಈ ಟ್ಯುಟೋರಿಯಲ್ ಗಳನ್ನು ಡಬ್ ಮಾಡಿರುವ ಇತರ ಅನೇಕ ಭಾಷೆಗಳಲ್ಲಿ ಒಂದನ್ನು ನೀವು ಆಯ್ಕೆ ಮಾಡಬಹುದು.

೨. ನೀವು ಇಂಗ್ಲೀಷ್ ಹೊರತುಪಡಿಸಿ ಬೇರೆ ಯಾವುದೇ ಒಂದು ಭಾಷೆಯನ್ನು ಬಳಸಿ ಕಲಿತಿರುವ ಸಂದರ್ಭದಲ್ಲಿ, ದಯವಿಟ್ಟು ಎಲ್ಲಾ ಟ್ಯುಟೋರಿಯಲ್ ಗಳನ್ನು ಇಂಗ್ಲೀಷ್ ನಲ್ಲಿ ಪುನರಾವರ್ತಿಸಿ. ಇದು ನಿಮ್ಮ ಇಂಗ್ಲೀಷ್ ಭಾಷೆಯ ಕೌಶಲ್ಯವನ್ನು ಸುಧಾರಿಸುತ್ತದೆ.

೩. ನೀವು ಈ ಟ್ಯುಟೋರಿಯಲ್ ಗಳನ್ನು ಪ್ರಸ್ತುತ ಲಭ್ಯವಿರದ ಯಾವುದೇ ಭಾಷೆಯಲ್ಲಿ ಡಬ್ ಮಾಡಲು ಬಯಸುತ್ತಿದ್ದರೆ, ದಯವಿಟ್ಟು ನಮಗೆ ತಿಳಿಸಿ.